ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಚಿಕ್ಕಮಗಳೂರು.

ಸಿ.ಸಿ. 17/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪಾರ್ವತಮ್ಮ | ಪಿ.ಡಬ್ಲ್ಯೂ.4 |
| ಗಂಡನ ಹೆಸರು | : | ಬಸವರಾಜು | ಸಿ.ಡಬ್ಲ್ಯೂ.5 |
| ವಯಸ್ಸು | : | 50 ವರ್ಷ | |
| ವೃತ್ತಿ | : | ಗೃಹಿಣಿ | |
| ವಾಸ | : | ಸೋಮನಾಥಪುರ | |

ದಿನಾಂಕಃ 15-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ಆರೋಪಿ ನನ್ನ ಮಗ. ಚಾಸಾ 4 ನನ್ನ ಅಕ್ಕನ ಮಗ. ನನ್ನ ಹೆಸರಿನಲ್ಲಿರುವ ಸಿಮ್ ನ್ನು ನನ್ನ ಮಗನಿಗೆ ನೀಡಿದ್ದೇನೆ. ನನ್ನ ಫೋನ್ ನಂಬರ್ ನ್ನು ಹೇಳಲು ನನಗೆ ಆಗುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲ. ನನ್ನ ಹೆಸರಿನಲ್ಲಿರುವ ಸಿಮ್ ನ್ನು ನನ್ನ ಮಗ ಉಪಯೋಗಿಸುತ್ತಿದ್ದನು. ಎಷ್ಟು ವರ್ಷದಿಂದ ಉಪಯೋಗಿಸುತ್ತಿದ್ದನು ಎಂದು ಹೇಳಲು ನನಗೆ ನೆನಪಿಲ್ಲ. ಸದರಿ ಸಿಮ್ ನ್ನು ಈಗ ಅಂದಾಜು 3-4 ವರ್ಷದ ಹಿಂದೆ ತೆಗೆದುಕೊಂಡಿರುತ್ತೇನೆ. ಸದರಿ ಸಿಮ್ ಯಾವ ಕಂಪನಿಯ ಸಿಮ್ ಎಂದು ಹೇಳಲು ನನಗೆ ಆಗುವುದಿಲ್ಲ. ನನ್ನ ಮಗ ಐ.ಟಿ.ಐ ಓದುತ್ತಿದ್ದನು. ಸದರಿ ಸಿಮ್ ನ್ನು ಉಪಯೋಗಿಸಿ ನನ್ನ ಮಗ ಏನು ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-

ನನ್ನ ಮಗ ಐ.ಟಿ.ಐ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಆತನಿಗೆ ಮೊಬೈಲ್ ನ ಅವಶ್ಯಕತೆ ಇದ್ದುದರಿಂದ ಹಾಗೂ ಆತನು ಮೈನರ್ ಆಗಿದ್ದರಿಂದ ಆತನಿಗೆ ನನ್ನ ಹೆಸರಿನಲ್ಲಿ ಜಿಯೋ ಸಿಮ್ ನಂಬರ್ 7760351108 ನ ಸಿಮ್ ಅನ್ನು ಖರೀದಿಸಿ ಆತನಿಗೆ ನೀಡಿರುತ್ತೇನೆ ಎಂದರೆ ಸರಿ.  ಆತನು ಸದರಿ ಸಿಮ್ ನ್ನು ಬಳಸುತ್ತಿದ್ದನು ಎಂದರೆ ಸರಿ. ನನ್ನ ಗಂಡನ ಹೆಸರಿಗೆ ಬಿ.ಎಸ್.ಎನ್.ಎಲ್. ಸಿಮ್ ನಂಬರ್ 8105315088 ನೇ ಸಿಮ್ ನ್ನು ಕೂಡಾ ನನ್ನ ಮಗನೇ ಆತನ ಎಂಐ ಕಂಪನಿಯ ಮೊಬೈಲ್ ನಲ್ಲಿ ಹಾಕಿ ಬಳಸುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ನಾನು ಆತನಿಗೆ ಕೊಟ್ಟ ಸಿಮ್ ಅನ್ನು ಆತನು ಬಳಸುತ್ತಿದ್ದನು ಎಂದರೆ ಸರಿ. ನನ್ನ ಮಗ ನನ್ನ ಸಿಮ್ ನ್ನು ಉಪಯೋಗಿಸಿ ಮಕ್ಕಳ ಅಶ್ಲೀಲ ವಿಡಿಯೋಗಳನ್ನು ನೋಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ದಿಃ 08.04.2020 ರಂದು ಆತನು ಸದರಿ ಅಶ್ಲೀಲ ವಿಡಿಯೋ ಪಾರ್ವಡ್ ಆಗಿರುವ ಬಗ್ಗೆ ಸೈಬರ್ ಪೋಲೀಸರು ನನಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾವಾಗಿ ದಿಃ 15.07.2022 ರಂದು ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ " ನನ್ನ ಮಗನಾದ ಸಾರ್ಥಕ್ ............... ಗುರುತಿಸುತ್ತೇನೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 12 ಎಂದು ಗುರುತಿಸಲಾಯಿತು. ಈಗ ನಾಯಾಲಯದ ಮುಂದೆ ನನಗೆ ತೋರಿಸುತ್ತಿರುವ ಮೊಬೈಲ್ ಆರೋಪಿ ಉಪಯೋಗಿಸುತ್ತಿದ್ದ ಮೊಬೈಲ್ ಎಂದರೆ ನನಗೆ ಗುರುತಿಸಲು ಸಾಧ್ಯವಿಲ್ಲ. ಆರೋಪಿಯು ನನ್ನ ಸ್ವಂತ ಮಗನಾಗಿದ್ದರಿಂದ ಆತನಿಗೆ ಎಲ್ಲಾ ವಿಚಾರ ಗೊತ್ತಿದ್ದರೂ

ಸಹ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಆರೋಪಿ ನನ್ನ ಸಿಮ್ ನ್ನು ಕೆಲಸಕ್ಕೆ ಹೋಗುತ್ತಿದ್ದ ಸಮಯದಲ್ಲಿ ಬೇರೆ ಯಾರಿಗೆ ಕೊಟ್ಟು ಬಳಸುತ್ತಿದ್ದ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯು ಸದರಿ ಮೊಬೈಲ್ ನ್ನು ಆತನೇ ಬಳಸತುತ್ತಿದ್ದನೋ ಅಥವಾ ಬೇರೆ ಯಾರೋ ಬಳಸುತ್ತಿದ್ದರೋ ಎಂದು ನಾನು ಪರಿಶೀಲಿಸಿರುವುದಿಲ್ಲ. ಆತನು ದಿನಾಲೂ ಕೆಲಸದಿಂದ ನಮ್ಮ ಮನೆಗೆ ಬರುತ್ತಿದ್ದನು. ಈ ಕೇಸಿನ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ